# ಜಾಣರ ಪೆಟ್ಟಿಗೆ

## ಒಂದೇ ಧರ್ಮದ ದೇಗುಲ ಸಾಕೆ?

ಬೆಳಿಗ್ಗೆ ಯಾವುದೇ ಟಿವಿ ಚಾನೆಲ್ ಹಾಕಿದರೂ ದೈವ ಭಕ್ತಿಯೇ ತುಂಬಿ ತುಳುಕುತ್ತಿರುತ್ತದೆ. ಇದರ ಜತೆಗೆ ಜೋತಿಷದ ಕಾರ್ಯಕ್ರಮಗಳು ಸೇರಿಕೊಂಡಿವೆ.

ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇವೆಲ್ಲಾ ಒಂದು ಧರ್ಮದ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿವೆಯೇನೋ ಎಂಬ ಗುಮಾನಿ ಕಾಡುತ್ತದೆ. 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಕುವೆಂಪುರವರಿಂದ ಕೊಂಡಾಡಿಸಿಕೊಂಡಿದ್ದ ಕರ್ನಾಟಕದಲ್ಲಿ ಬೇರೆ ಯಾವ ಧರ್ಮದವರು ಇಲ್ಲವೇ ಇಲ್ಲ ಎಂಬ ಭಾವನೆಯನ್ನು ನಮ್ಮ ಚಾನೆಲ್‌ಗಳು ರೂಢಿಸಿಕೊಂಡಿರಬೇಕು. ಈ ವಾಹಿನಿಗಳಿಗೆ ಅನ್ಯಧರ್ಮಗಳ ಬಗೆಗೆ ಏಕಿಷ್ಟು ತಿರಸ್ಕಾರ? ಈ ರಾಜ್ಯದಲ್ಲಿ ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ, ಪಾರಸಿ, ಬಹಾಯಿ ಧರ್ಮದವರೂ ಇದ್ದಾರೆ. ಈ ಧರ್ಮಗಳಿಗೆ ಸಂಬಂಧಿಸಿದ ಕಾರ್ಯಕ್ರಮವಾಗಲೀ, ಪೂಜಾ ಕೇಂದ್ರಗಳ ಬಗೆಗಾಗಲೀ ಮಾಹಿತಿಯನ್ನು ನೀಡುವ ಕೆಲಸ ಈ ವಾಹಿನಿಗಳಿಂದ ಏಕೆ ನಡೆಯುತ್ತಿಲ್ಲ. ಮಸೀದಿ, ಚರ್ಚ್, ಬಸದಿ, ಗುರುದ್ವಾರಗಳ ಬಗೆಗೂ ಈ ವಾಹಿನಿಗಳು ಕಾರ್ಯಕ್ರಮ ನೀಡಿದಾಗ ಮಾತ್ರ ಇವುಗಳನ್ನು ಸೆಕ್ಯುಲರ್ ವಾಹಿನಿಗಳು ಎಂದು ಕರೆಯಬಹುದು.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ಬಡವರ ಮನೆ ಊಟ ಬೇಡವೆ?

'ಬೊಂಬಾಟ್ ಭೋಜನ' ನಿಜಕ್ಕೂ ಜೀವನದಲ್ಲಿ ಬೊಂಬಾಟ್ ಆಗಿರುವವರೇ ಮಾಡಬೇಕು! ಬೆಳಿಗ್ಗೆಯಿಂದ ಸಂಜೆವರೆಗೆ ಬೆವರು ಹರಿಸಿ ಕೆಲಸ ಮಾಡಿದರೂ ಎರಡು ಹೊತ್ತಿನ ಊಟಕ್ಕೂ ಪರದಾಡುವ ಸಾಮಾನ್ಯ ಜನರಿಗೆ ಸಿಹಿ ಕಹಿ ಚಂದ್ರು ನಡೆಸಿಕೊಡುವ ಅಡುಗೆ ಕಾರ್ಯಕ್ರಮ 'ತಿರುಕ ರಾಜನಾದ...' ಕನಸು ಕಂಡಂತೆ. ಸ್ವಲ್ಪ ತುಪ್ಪ, ಸ್ವಲ್ಪ ಎಣ್ಣೆ ಅಂತಾರೆ. ಕಾಲು ಕೆ.ಜಿ.ನೋ ಅರ್ಧ ಕೆ.ಜಿ.ನೋ ಸುರಿತಾರೆ. ಒಂದು ಅಡುಗೆಗೆ ಹಾಕಿದಷ್ಟು ಎಣ್ಣೆಯನ್ನು ಒಂದು ವಾರ ಪೂರ್ತಿ ಅಡುಗೆ ದೇವರ ಮುಂದೆ ದೀಪಕ್ಕೆ ಬಳಸುವ ಜನರೇ ನಮ್ಮ ದೇಶದಲ್ಲಿ ಬಹುಸಂಖ್ಯಾತರು. ಇನ್ನು ತುಪ್ಪ, ಹಬ್ಬದ ಊಟಕ್ಕೂ ಕಾಣದು. ಉಪ್ಪು ಖಾರ ಹಾಕಿ ಕುದಿಸಿದ ಹುಣಸೆ ಹುಳಿಯೇ ರೊಟ್ಟಿಗೂ ಅನ್ನಕ್ಕೂ ಜೊತೆ.

ಚಂದ್ರು ಅಡುಗೆಗೆ ಬಳಸುವ ಎಲ್ಲ ಸಾಮಗ್ರಿಗಳ ಹೆಸರು ಕೂಡಾ ಎಷ್ಟೋ ಜನರಿಗೆ ತಿಳಿದಿಲ್ಲ. ಸುವರ್ಣ, ಈ ಟಿವಿ, ಝೀ ಕನ್ನಡ, ಕಸ್ತೂರಿ ವಾಹಿನಿಯಲ್ಲಿ ತೋರಿಸುವ ಅಡುಗೆ ಆಕಾಶಕ್ಕೆ ಏಣಿ ಹಾಕಿದಂತಿದೆ. ರುಚಿ ಸವಿಯಲು ಹೋಟೆಲ್, ಬೇಕರಿಗಳಿಗೆ ಕ್ಯಾಮೆರಾ ತೆಗೆದುಕೊಂಡು ಹೋಗುವ ಬದಲು ಗುಡಿಸಲುಗಳಿಗೋ, ಮಧ್ಯಮವರ್ಗದ ಕುಟುಂಬಗಳಿಗೋ, ರೈತರ ಮನೆಗಳಿಗೋ ಭೇಟಿ ನೀಡಿ ಅವರ ಊಟವನ್ನೊಮ್ಮೆ ರುಚಿ ನೋಡಲಿ, ಅದನ್ನು ವೀಕ್ಷಕರಿಗೆ ತೋರಿಸಲಿ. ಇಲ್ಲವಾದರೆ ಇಡೀ ಟಿವಿ ವಾಹಿನಿಗಳೇ ಶ್ರೀಮಂತರ ಪರ ಎನ್ನಬೇಕಾಗುತ್ತದೆ.

–ರತ್ನ ಅಶೋಕ ಗೊರವರ, ಮೊರಬ

## ಸುದ್ದಿಯ ಅರಚಾಟ

ಎಲ್ಲ ವಾಹಿನಿಗಳಲ್ಲೂ ವಾರ್ತಾ ಪ್ರಸಾರದ ವೇಳೆ ಹೆಚ್ಚಿನ ಮಾಹಿತಿಗಾಗಿ ತಮ್ಮ ವರದಿಗಾರರನ್ನು ನೇರ ಸಂಪರ್ಕಿಸುತ್ತಾರಷ್ಟೆ. ಆಗ ಆ ವರದಿಗಾರರು ತಾರಕ ಸ್ವರದಲ್ಲಿ ಮಾಹಿತಿ ನೀಡಲು ಆರಂಭಿಸುತ್ತಾರೆ. ಹೇಳಿದ್ದನ್ನೇ ಹತ್ತಾರು ಬಾರಿ ಹೇಳುತ್ತಾರೆ. ವಾಕ್ಯ ಪೂರ್ತಿಯಾಗುವುದಿಲ್ಲ. ತಮ್ಮ ಬಾಯಿ ಸನಿಹವೇ ಮೈಕ್ ಇದ್ದರೂ ಅರಚುತ್ತ ಕೇಳುಗರಿಗೆ ತಲೆ ನೋವು ಬರುವಷ್ಟು ಕಿರಿಕಿರಿ ಮಾಡಿಬಿಡುತ್ತಾರೆ. ಕೆಲವೊಮ್ಮೆ ವಾರ್ತಾ ವಾಚಕರೂ ಮುಖ್ಯಾಂಶಗಳನ್ನು ಹೇಳುವಾಗ ಒಳ್ಳೆಯ ಸುದ್ದಿಗಳನ್ನೂ ಭೀಕರ ಸುದ್ದಿ ಹೇಳುವಂತೆ ಸ್ವರ ಬದಲಿಸಿ ಹೇಳುತ್ತಾರೆ! ಭಯಂಕರ ಸಂಗೀತ ಹಿನ್ನೆಲೆ ಬೇರೆ.

ಸುದ್ದಿಗಳಿಗಾಗಿ, ಅವುಗಳ ವಿಶ್ಲೇಷಣೆಗಾಗಿ ಪತ್ರಿಕೆಗಳನ್ನು ಓದುವುದೇ ವಿಹಿತ. ಅಲ್ಲಿ ನಮ್ಮದೇ ಆಯ್ಕೆ ಇರುತ್ತದೆ.

–ಗ.ಮ. ತುಂಬೆಮನೆ, ಊರತೋಟ

# ಪ್ರತಿಕ್ರಿಯೆ

## ಕರಾವಳಿಯ ಉದ್ದ ಎಷ್ಟು?

ಈ ಟಿವಿಯ 'ರಾಜ ರಾಣಿ...' ಕಾರ್ಯಕ್ರಮದಲ್ಲಿ ಕರ್ನಾಟಕದ ಕರಾವಳಿ ಎಷ್ಟು ಕಿ.ಮೀ. ದೂರವಿದೆ ಎಂದು ಕೇಳಿದ ರಮೇಶ್, 20 ಕಿ.ಮೀ. ವ್ಯತ್ಯಾಸವಿದ್ದರೂ ಪರವಾಗಿಲ್ಲ ಎಂದು ಸಮಜಾಯಿಷಿ ನೀಡಿದ್ದರು. ಆಗ ಸ್ಪರ್ಧಿ ರವಿಶಂಕರ್ 330 ಕಿ.ಮೀ ಎಂದು ಉತ್ತರ ಕೊಟ್ಟರು. ನಿಮ್ಮ ಉತ್ತರ ಸರಿ. ಕರ್ನಾಟಕದ ಕರಾವಳಿಯ ಉದ್ದ 320 ಕಿ.ಮೀ. ಎಂದು ಹೇಳಿದರು.

ಆದರೆ ಇದು ತಪ್ಪು. ಕರ್ನಾಟಕದ ಕರಾವಳಿಯ ಉದ್ದ ಸುಮಾರು 400 ಕಿ.ಲೋ. ಮೀಟರ್. (ಆಧಾರ: ಕರ್ನಾಟಕ ರಾಜ್ಯ ಗ್ಯಾಸೆಟಿಯರ್)

–ಎನ್. ಪ್ರಕಾಶ, ದೇವನಹಳ್ಳಿ

## ಗೌರಿಶಂಕರ ಶಿಖರದ ಸಾಧನೆ

ಪೋಷಕರು ಮಕ್ಕಳ ಮನಸ್ಸನ್ನು ಅರಿತುಕೊಂಡು ಆ ನಿಟ್ಟಿನಲ್ಲಿ ಮಗು ಬೆಳೆದರೆ ಅಂತಹ ಮಗು ಸಾಧನೆಯ ಗೌರಿಶಂಕರ ಶಿಖರ ಹತ್ತಬಹುದು ಎಂಬುದನ್ನ ಮನವರಿಕೆ ಮಾಡಿ ಕೊಡುವಲ್ಲಿ ಸಹಾಯಕವಾಗಿದೆ ಕಸ್ತೂರಿ ವಾಹಿನಿಯ 'ಕಾಮನಬಿಲ್ಲು' ಕಾರ್ಯಕ್ರಮ.

–ಸಾವಿತ್ರಮ್ಮ ಕೆ. ವಿಭೂತಿ, ಹರಿಹರ

## ರಾಜ್ಯಪುಷ್ಪ ಅಧಿಕೃತವೆ?

'ಥಟ್ ಅಂತ ಹೇಳಿ' ಚಂದನವಾಹಿನಿಯ ರಸಪ್ರಶ್ನೆ ಸರಣಿಯಲ್ಲಿ ಸೋಮೇಶ್ವರರು ರಾಜ್ಯ ಪುಷ್ಪ, ರಾಜ್ಯ ಫಲ, ರಾಜ್ಯ ವೃಕ್ಷ, ರಾಜ್ಯ ಪಕ್ಷಿ, ರಾಜ್ಯ ಪ್ರಾಣಿಗಳ ಕುರಿತಾಗಿ ಪ್ರಶ್ನಿಸಿ, ತಾವರೆ ರಾಜ್ಯ ಪುಷ್ಪ ಎಂದು ಹೇಳಿದರು. ಆದರೆ ಪೂರಕ ಮಾಹಿತಿಯ ಅಗತ್ಯವಿತ್ತು. ಪ್ರತಿಯೊಂದು ರಾಜ್ಯಕ್ಕೂ ರಾಜ್ಯ ಲಾಂಛನಗಳಂತೆ ಪುಷ್ಪ, ಫಲ, ವೃಕ್ಷ, ಪಕ್ಷಿ, ಪ್ರಾಣಿಗಳಿವೆಯೆ? ಇದು ಅಧಿಕೃತವಾಗಿ ಸರಕಾರದಿಂದ ಮಾನ್ಯತೆ ಪಡೆದಿವೆಯೆ?

–ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ

## ಹಿಂದಿನ ಶತಮಾನದ ಕಥೆ

ಈ ಟಿವಿಯ ಶುಭ ಮಂಗಳ ಹೆಚ್ಚುಕಡಿಮೆ ಇಪ್ಪತ್ತನೇ ಶತಮಾನದ ನಲವತ್ತು ಐವತ್ತರ ದಶಕದ ತೆಲುಗು ಸಾಂಸಾರಿಕ ಚಿತ್ರಕ್ಕೆ ಬಣ್ಣ ಕೊಟ್ಟಂತೆ ಇದೆ.

ನಿರ್ದೇಶಕರೇ ದಯವಿಟ್ಟು ಹಿಂದಿನ ಶತಮಾನದ ಕಥೆ ಎಂದಾದರೂ ಆರಂಭದಲ್ಲಿ ತೋರಿಸಿ ವೀಕ್ಷಕರ ನಿರೀಕ್ಷೆಯನ್ನು ಹತೋಟಿಯಲ್ಲಿಡಿ.

–ಸತ್ಯಬೋಧ, ವ್ಯಾಸನಕೆರೆ

## ಸುಶೀಲಾಳ ಗಜಗರ್ಭ!

ಈ ಟಿವಿಯ 'ಮಹಾನವಮಿ' ಧಾರಾವಾಹಿಯಲ್ಲಿ ಸುಶೀಲಾಗೆ ಉಡಿ ತುಂಬುವ ಕಾರ್ಯಕ್ರಮವಾಗಿ ಎಷ್ಟೋ ದಿನಗಳಾದವು. ಇನ್ನೂ ಹೆರಿಗೆ ಯಾವಾಗ? ಅದೇನು ಗಜಗರ್ಭವೇ?

'ಮಹಾನವಮಿ' ಮುಂಚೆ ಇದ್ದಂತೆ ರಾತ್ರಿ 7–30ಕ್ಕೆ ಪ್ರಸಾರವಾಗಲಿ.

–ರುಕ್ಮಿಣಿ ದೇಶಪಾಂಡೆ, ಗೋಕಾಕ

## ಉಪಯುಕ್ತ ಕಾರ್ಯಕ್ರಮ

ಅಸಹಾಯಕ, ಅಂಗವಿಕಲರಿಗೆ ಸಹಾಯ ಮಾಡುವ ಚಿತ್ರನಟ ಶಿವರಾಜಕುಮಾರರ ಝೀ ವಾಹಿನಿಯ 'ನಿಮಗಾಗಿ' ಕಾರ್ಯಕ್ರಮ ಉಪಯುಕ್ತವಾಗಿದೆ.

–ಬಿ.ಎಸ್.ಮುಳ್ಳೂರ, ಹಲಗತ್ತಿ

## ಅನಿರೀಕ್ಷಿತ– ಸ್ವಾರಸ್ಯಕರ

ಈ ವಾರ ನಮ್ಮೊಂದಿಗೆಯಲ್ಲಿ ಅನಿರೀಕ್ಷಿತವಾಗಿ ಅಭಿನಯ ಲೋಕಕ್ಕೆ ಬಂದ ಅರವಿಂದ ಅವರ ಸಂದರ್ಶನ ಸ್ವಾರಸ್ಯಕರವಾಗಿದೆ.

–ಎಚ್.ಆನಂದ ಕುಮಾರ್, ಚಿತ್ರದುರ್ಗ/ ಕೊಹಿಮ, ಬಸರಕೋಡು/ ರುದ್ರೇಶ್ ಅದರಂಗಿ, ಕೋಲಾರ/ ಜಯಪ್ರಕಾಶ ಗೌಡ, ಮಂಡ್ಯ